ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ.262/2023

| | | |
|---|---|---|
| ಸಾಕ್ಷಿದಾರರ ಹೆಸರು | ವಾಹಿದಾ ಬಾನು | ಸಿ.ಡಬ್ಲ್ಯೂ:3 ಪಿ.ಡಬ್ಲ್ಯೂ: 10 |
| ಗಂಡನ ಹೆಸರು | ಕಮರ್ ಪಾಷಾ | |
| ವಯಸ್ಸು | 58 ವರ್ಷ | |
| ಉದ್ಯೋಗ | ಗೃಹಿಣಿ | |
| ವಾಸ ಸ್ಥಳ | ಗೋಣಿಬೀಡು, ಮೂಡಿಗೆರೆ | |

ದಿನಾಂಕ: 25.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಮಗ. ಚಾಸಾ.1, 2, 4 ಮತ್ತು 5 ನನಗೆ ಗೊತ್ತಿಲ್ಲ. ನನಗೆ ಈ ಕೇಸಿನ ವಿಚಾರ ತಿಳಿದಿಲ್ಲ. ನಾನು ಈ ಹಿಂದೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ, ಮನೆಯಲ್ಲಿ ಇದ್ದೇನೆ. ನಿ.ಪಿ.17 ಮತದಾನದ ಗುರುತಿನ ಚೀಟಿ ನನಗೆ ಸೇರಿದ್ದು, ಅದು ಕಳೆದು ಹೋಗಿತ್ತು. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸ.ಸ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು ಸ.ಸ.ಅ. ರವರಿಂದ**

2. ನಾನು 8ನೇ ತರಗತಿ ವರೆಗೆ ಕಲಿತಿದ್ದೇನೆ. ನನ್ನ ಮಗ 9ನೇ ತರಗತಿ ವರೆಗೆ ಕಲಿತಿರಬಹುದು, ಆತ ಎಲ್ಲಿಯವರೆಗೆ ಕಲಿತಿದ್ದಾನೆ ಎಂದು ನಿಖರವಾಗಿ ಗೊತ್ತಿಲ್ಲ. ನಮ್ಮ ಮನೆಯಲ್ಲಿ ನಾನು ಮತ್ತು ನನ್ನ ಮಗ ವಾಸವಿದ್ದೇವೆ. ನಾನು ಮತ್ತು ನನ್ನ ಮಗ ಸುಮಾರು ವರ್ಷಗಳಿಂದ ಒಟ್ಟಿಗೆ ವಾಸವಿದ್ದೇವೆ. ನಾನು ಯಾವುದೇ ಕೆಲಸವನ್ನು ಮಾಡಿಕೊಂಡಿಲ್ಲ, ನನ್ನ ಮಗ ತರಕಾರಿ ವ್ಯಾಪಾರ ಮಾಡಿಕೊಂಡಿದ್ದಾನೆ.

3. ನಾನು ಗೋಣಿಬೀಡುವಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಅಡುಗೆಯವಳಾಗಿ ಕೆಲಸ ನಿರ್ವಹಿಸುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಶಾಲೆಯಲ್ಲಿ ಅಕ್ಷರ ದಾಸೋಹದ ಖಾತೆ ಸಂಖ್ಯೆ 1162101016113 ಕೆನರಾ ಬ್ಯಾಂಕ್ ಮೂಡಿಗೆರೆಯಲ್ಲಿ ಮುಖ್ಯ ಶಿಕ್ಷಕರಾದ ಪಾರ್ವತಮ್ಮ ಮತ್ತು ನನ್ನ ಹೆಸರಿನಲ್ಲಿ ಜಂಟಿ ಖಾತೆ ಇತ್ತು ಎಂದರೆ ಸರಿಯಲ್ಲ. ಸದರಿ ಖಾತೆಯಲ್ಲಿ ಶಾಲಾ ಅಕ್ಷರ ದಾಸೋಹಕ್ಕೆ ಸರ್ಕಾರದ ಶಿಕ್ಷಣ ಇಲಾಖೆಯಿಂದ ಪ್ರತಿ ತಿಂಗಳು ವಿದ್ಯಾರ್ಥಿಗಳ ಹಾಜರಾತಿಗೆ ಅನುಗುಣವಾಗಿ ಚೆಕ್ ಮೂಲಕ ವ್ಯವಹಾರಿಸುತ್ತಿದ್ದೆವು ಎಂದರೆ ಸರಿಯಲ್ಲ. ಸದರಿ ಚೆಕ್ ಗಳಿಗೆ ಮುಖ್ಯ ಶಿಕ್ಷರ ಮತ್ತು ನನ್ನ ಸಹಿ ಅಗತ್ಯತೆ ಇತ್ತು ಎಂದರೆ ಸರಿಯಲ್ಲ. ದಿಃ 17.07.2022 ರಂದು ಜೂನ್ ತಿಂಗಳ ಶಾಲಾ ಬಿಸಿ ಊಟದ ಖರ್ಚನ್ನು ನನ್ನ ಹೆಸರಿಗೆ ರೂ.16,572-00 ಮೊತ್ತದ ಚೆಕ್ಕನ್ನು ಶಾಲಾ ಶಿಕ್ಷಕಿ ಶಂಕುತಲಾ ರವರಿಗೆ ನೀಡಿದ್ದು, ಹಿಂದಿನ ಮೇ ಮತ್ತು ಜೂನ್ ತಿಂಗಳಿನಲ್ಲಿ ಪಾಸ್ ಪುಸ್ತಕಕ್ಕೆ ಬ್ಯಾಂಕಿನವರು ತಾಂತ್ರಿಕ ಕಾರಣ ನೀಡಿ ಮುದ್ರಿಸಿಕೊಟ್ಟಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ ಕಾರಣ ಬಿಸಿ ಊಟದ ಮೇಲ್ವಿಚಾರಣೆ ಜಾವಾಬ್ದಾರಿ ಹೊಂದಿದ್ದ ಸಹ ಶಿಕ್ಷಕಿಯಾಗಿ ಶಂಕುತಲಾ ರವರು ದಿಃ 16.07.2022 ರಂದು ಪಾಸ್ ಪುಸ್ತಕ ನಮೂದಿಸಿಕೊಂಡು ಬರಲು ಹೋಗಿದ್ದು, ಆ ಸಂದರ್ಭದಲ್ಲಿ ಅನ್ಯ ವ್ಯಕ್ತಿಯೊಬ್ಬ ಮೊಬೈಲ್ ಬ್ಯಾಂಕಿಂಗ್ ಬಳಸಿ ಶಾಲಾ ಬಿಸಿ ಊಟದ ಖಾತೆಯಿಂದ ರೂ.3,62,667-00 ಹಣವನ್ನು ಬಿಡಿಸಿರುವುದು ಕಂಡು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ಶಂಕುತಲಾ ರವರು ಮುಖ್ಯ ಶಿಕ್ಷಕಿಗೆ ತಿಳಿಸಿದಾಗ ಅವರು ಹೋಗಿ ಬ್ಯಾಂಕ್ ಪಾಸ್ ಪುಸ್ತಕ ನೋಡಲಾಗಿ ದಿಃ 28.04.2022 ರಿಂದ 27.06.2022 ರವರೆಗೆ ಆರೋಪಿ ಜಾಕೀರ್ ಪಾಷಾ ಯಾನೆ ಜಾಕೀರ್ ಹುಸೇನ್ ರವರ ಖಾತೆಗೆ online ಹಣ ವರ್ಗಾವಣೆಯಾಗಿರುವುದು ತಿಳಿದು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ 4 ತಿಂಗಳ ಹಿಂದೆ ನಿಮ್ಮನ್ನು ಬ್ಯಾಂಕಿಗೆ ಕರೆದುಕೊಂಡು ಹೋಗಿ ನಿಮ್ಮ ಕೆನರಾ ಬ್ಯಾಂಕ್ ಖಾತೆಗೆ ಆತನ ಫೋನ್ ನಂಬರ್ ಲಿಂಕ್ ಮಾಡಿಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಶಾಲಾ ಮಕ್ಕಳ ಅಕ್ಷರ ದಾಸೋಹದ

ಹಣವನ್ನು ಶಾಲಾ ಖಾತೆಯಿಂದ ಮೊಬೈಲ್ ಬ್ಯಾಂಕಿಂಗ್ ಮೂಲಕ ತನ್ನ ಖಾತೆಗೆ ವರ್ಗಾಯಿಸಿಕೊಂಡ ಆರೋಪಿಯನ್ನು ನೋಡಿದ್ದೇನೆ, ಪುನಃ ನೋಡಿದರೆ ಗುರುತಿಸುತ್ತೇನೆ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಹೇಳಿಕೆಯ ವಿಚಾರಗಳನ್ನು ನಿರಾಕರಿಸಿದ್ದರಿಂದ ನಿರಾಕರೀತ ಹೇಳಿಕೆಯನ್ನು ನಿ.ಪಿ.43 ಎಂದು ಗುರುತಿಸಲಾಯಿತು.

4. ನೀವು ಅಡುಗೆ ಕೆಲಸ ಮಾಡುತ್ತಿದ್ದಾಗ ನಿಮ್ಮ ಬಳಿ ಮೊಬೈಲ್ ಇತ್ತಾ ಎಂದರೆ ಸಾಕ್ಷಿ ನಾನು ಅಡುಗೆ ಕೆಲಸ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನು ಅಡುಗೆ ಕೆಲಸ ಮಾಡುತ್ತಿದ್ದು, ಆ ಸಮಯದಲ್ಲಿ ಮೊಬೈಲ್ ಅನ್ನು ಸಹ ಹೊಂದಿದ್ದು, ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಮೊಬೈಲ್ ಅನ್ನು ಆರೋಪಿ ಬಳಸುತ್ತಿದ್ದ ಎಂದರೆ ಸರಿಯಲ್ಲ. ನನ್ನ ಮೊಬೈಲ್ ಅನ್ನು ಆರೋಪಿ ಬಳಸಿ ದುರುಪಯೋಗ ಪಡಿಸಿಕೊಂಡಿದ್ದಾನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿ ನನ್ನ ಮೊಬೈಲ್ ಬಳಸಲು ನಾನು ಕುಮ್ಮಕ್ಕು ನೀಡಿದ್ದು, ಈಗ ಒಪ್ಪಿಕೊಂಡರೆ ನನಗೆ ಮತ್ತು ನನ್ನ ಮಗನಿಗೆ ತೊಂದರೆಯಾಗುತ್ತದೆ ಎಂಬ ಕಾರಣದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದಿದ್ದಾರೆ, ನಾನು ಹೇಳಿಕೆಯನ್ನು ಸಹ ನೀಡಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಕೆ.ಎಂ.ಪಿ. ವಕೀಲರಿಂದ – ಆರೋಪಿತನ ಪರವಾಗಿ

5. ಪಾಟೀ ಸವಾಲು ಏನು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ